# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 799 |
| ಸದಸ್ಯರ ಹೆಸರು | : | ಶ್ರೀ ಮಧು ಜಿ.ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 22.02.2023 |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ಕಂದಾಯ ಇಲಾಖೆ ವತಿಯಿಂದ 2010-11 ರಿಂದ ಇಲ್ಲಿಯವರೆಗೆ ವಿವಿಧ ಇಲಾಖೆ/ಯೋಜನೆಗಳಡಿ ನಗರ ಮತ್ತು ಗ್ರಾಮೀಣ ನಿವೇಶನರಹಿತರಿಗೆ ನಿವೇಶನ ನೀಡಲು ಕಾಯ್ದಿರಿಸಿರುವ ಜಮೀನು ವಿಸ್ತೀರ್ಣ ಎಷ್ಟು; (ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಮಾಹಿತಿಯನ್ನು ಜಿಲ್ಲಾವಾರು ನೀಡುವುದು) | ಕಂದಾಯ ಇಲಾಖೆ ವತಿಯಿಂದ 2010-11 ರಿಂದ ಇಲ್ಲಿಯವರೆಗೆ ವಿವಿಧ ಇಲಾಖೆ/ಯೋಜನೆಗಳಡಿ ನಗರ ಮತ್ತು ಗ್ರಾಮೀಣ ನಿವೇಶನರಹಿತರಿಗೆ ನಿವೇಶನ ನೀಡಲು ಕಾಯ್ದಿರಿಸಿರುವ ಜಮೀನಿನ ವಿವರ ಈ ಕೆಳಗಿನಂತಿದೆ:-<br><br>ಕ್ರ. ಸಂ. / ಜಿಲ್ಲೆ / ಕಾಯ್ದಿರಿಸಿರುವ ಜಮೀನಿನ ವಿಸ್ತೀರ್ಣ (ಎಕರೆಗಳಲ್ಲಿ)<br>1. / ಮಂಡ್ಯ / 323-18<br>2. / ಮೈಸೂರು / 269-17<br>3. / ಹಾಸನ / 241-18<br>4. / ಚಾಮರಾಜನಗರ / 45.37 |
| (ಆ) | ಸದರಿ ಕಾಯ್ದಿರಿಸಿದ ಜಮೀನುಗಳಲ್ಲಿ ಕಂದಾಯ ಇಲಾಖೆ ವಿರುದ್ಧ ನ್ಯಾಯಾಲಯಗಳಲ್ಲಿ ದಾಖಲಾಗಿರುವ ಪ್ರಕರಣಗಳೆಷ್ಟು; (ಸದರಿ ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು/ ಗ್ರಾಮ ಪಂಚಾಯತ್‌ವಾರು ಮಾಹಿತಿ ನೀಡುವುದು) | ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಅಂತಹ ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ.<br><br>ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ನಗರ ನಿವೇಶನ ರಹಿತರಿಗೆ ನಿವೇಶನ ನೀಡಲು ಕಾಯ್ದಿರಿಸಿದ ಜಮೀನುಗಳಲ್ಲಿ ಹೆಚ್.ಡಿ. ಕೋಟೆ ಪುರಸಭೆ ಜಮೀನು ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುತ್ತದೆ. ಗ್ರಾಮೀಣ ನಿವೇಶನ ರಹಿತರಿಗೆ ನಿವೇಶನ ನೀಡಲು ಕಾಯ್ದಿರಿಸಿದ ಜಮೀನುಗಳಲ್ಲಿ ಸರಗೂರು (ಬಸವನಪುರ) 1.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಈ ಹಿಂದಿನ ಭೂ ಮಾಲೀಕರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ ಹಾಗೂ ಬಸವನಪುರ (ಕೆಂಪಿಸಿದ್ದನಹುಂಡಿ) 2-00 ಎಕರೆ ಸರ್ಕಾರಿ ಜಮೀನು ತಮಗೆ ಸೇರಿದ್ದೆಂದು ಶ್ರೀ ಪುಟ್ಟಬಸಮ್ಮ ಎಂಬವರು ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತಾರೆ. |

| | | |
|---|---|---|
| | | ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ, ಮಂಡ್ಯ ತಾಲ್ಲೂಕು, ಕಸಬಾ ಹೋಬಳಿ ಬೂದನೂರು ಗ್ರಾಮದ ಸ.ನಂ.81, 87, 88, 89 ಹಾಗೂ 90 ರಲ್ಲಿ ಒಟ್ಟು 2-04 ಎಕರೆ ಜಮೀನನ್ನು ಬೂದನೂರು ಗ್ರಾಮ ಪಂಚಾಯಿತಿ ಇವರಿಗೆ ನಿವೇಶನ ರಹಿತರಿಗೆ ನಿವೇಶನಕ್ಕಾಗಿ ಕಾಯ್ದಿರಿಸಿರುವುದರ ಸಂಬಂಧ ಕರ್ನಾಟಕ ಮೇಲ್ಮನವಿ ನ್ಯಾಯಧಿಕರಣದಲ್ಲಿ ಅಪೀಲು ಸಂಖ್ಯೆ: 484/2022 ರಂತೆ ಪ್ರಕರಣ ದಾಖಲಾಗಿರುತ್ತದೆ.<br><br>ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ಕಿಕ್ಕೇರಿ ಹೋಬಳಿ ಶೆಟ್ಟಹಳ್ಳಿ ಗ್ರಾಮದ ಸ.ನಂ. 48ಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿ ಸಂಖ್ಯೆ: 15786/20221 ರಂತೆ ಪ್ರಕರಣ ದಾಖಲಾಗಿರುತ್ತದೆ. |
| (ಇ) | ಕಾಯ್ದಿರಿಸಿದ ಜಮೀನುಗಳಲ್ಲಿ ತಕರಾರು, ನಿವೇಶನ ರಚಿಸಲು ಯೋಗ್ಯವಲ್ಲದ ಜಮೀನುಗಳ ಬದಲಿಗೆ ಬೇರೆ ಜಮೀನು ನೀಡಲು ಕಂದಾಯ ಇಲಾಖೆ ಕೈಗೊಂಡಿರುವ ಕ್ರಮಗಳು ಹಾಗೂ ಯಾವ ಕಾಲಮಿತಿಯಲ್ಲಿ ಬದಲಿ ಜಮೀನು ನೀಡಲಾಗುವುದು? (ವಿವರ ನೀಡುವುದು) | ನ್ಯಾಯಾಲಯಗಳ ಅಂತಿಮ ತೀರ್ಪಿನ ನಂತರ ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ. |

(ಕಡತ ಸಂಖ್ಯೆ: ಕಂಇ 17 ಎಲ್‌ಜಿವ್ಯೆ 2023)

(ಆರ್.ಅಶೋಕ)
ಕಂದಾಯ ಸಚಿವರು